ದಿನಾಂಕಃ 02.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ **2** ನೇ ಪ್ರತಿವಾದಿಯ ಪರ ವಕೀಲರಿಂದಃ

6. ಯಾವ ದಾಖಲೆಗಳನ್ನು ನೋಡಿ ನೀವು ದಾಖಲೆಗಳನ್ನು ಸಲ್ಲಿಸಲು ಮಾಹಿತಿ ನೀಡಿದ್ದೀರಾ ಎಂದರೆ ಸಾಕ್ಷಿ ಹೊಸಮನಿರವರು ಬರೆಸಿಕೊಂಡಿದ್ದ ಕಾಗದವನ್ನು ನೋಡಿ ಮಾಹಿತಿ ಕೊಟ್ಟಿದ್ದೇವೆ ಎನ್ನುತ್ತಾರೆ. ಮುರಿಗೆಪ್ಪ ಹೊಸಮನಿರವರು ಖರೀದಿ ಕರಾರು ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಮೊದಲು ನಾನು ಖರೀದಿ ಮಾಡಿದ್ದೇನೆ ನಂತರ ಅವರು ಬರೆಸಿಕೊಂಡಿದ್ದಾರೆ ಎನ್ನುತ್ತಾರೆ. ಮುರಿಗೆಪ್ಪ ಹೊಸಮನಿರವರ ಖರೀದಿ ಪತ್ರವನ್ನು ಈ ದಾವೆಯಲ್ಲಿ ಹಾಜರು ಪಡಿಸಿದ್ದೇನೆ. ನನ್ನ ಕರಾರುಪತ್ರ 2 ನೇ ಪ್ರತಿವಾದಿಯ ಖರೀದಿ ಕರಾರು ಪತ್ರಕ್ಕೂ ಮೊದಲು ಆಗಿದೆ ಎಂದು ತೋರಿಸಲು ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣಪತ್ರವನ್ನು ಹಾಜರು ಪಡಿಸಿಲ್ಲ. ನಾನು ಕರಾರು ಮಾಡಿಕೊಳ್ಳುತ್ತಿದ್ದೇನೆ ಆಸ್ತಿಯನ್ನು ಯಾರು ಖರೀದಿ ಮಾಡಬಾರದು ಎಂದು ವಾರ್ತಾ ಪತ್ರಿಕೆಯಲ್ಲಿ ಪ್ರಕಟಿಸಿರುವುದಿಲ್ಲ. ಉತಾರದಲ್ಲಿ ಒಂದು 20 ಗುಂಟೆಯ ಜಮೀನಿಗೆ ಹೆಸರು ಬರುತ್ತಿದೆ. ಮತ್ತೊಂದು 20 ಗುಂಟೆಯ ಜಮೀನಿಗೆ ಬರುತ್ತಿಲ್ಲ. ಸರ್ವೇ ನಂ.118/1-ಬ ರಲ್ಲಿ 20 ಗುಂಟೆಯನ್ನು ಹೊಸಮನಿರವರು ನಾನು ಖರೀದಿ ಮಾಡಿದ ನಂತರ ಅವರು ಖರೀದಿ ಮಾಡಿಕೊಂಡಿದ್ದಾರೆ. ಸದರಿ ಸರ್ವೇ ನಂಬರ್‌ನ 20 ಗುಂಟೆಯ ಖಾತೆ ಹೊಸಮನಿರವರ ಹೆಸರಿನಲ್ಲಿ ದಾಖಲಾಗಿದೆ ಎಂಬುವುದು ನನಗೆ ಗೊತ್ತಿಲ್ಲ.

2. ನನಗೆ ಗೋಕಾಕ್‌ನಲ್ಲಿ 20 ಗುಂಟೆ ಜಮೀನು ಇತ್ತು, ಅದನ್ನು ಚಿಪ್ಪಲಕಟ್ಟಿರವರಿಗೆ 1 ವರ್ಷದ ಹಿಂದೆ ಮಾರಾಟ ಮಾಡಿದ್ದೇನೆ. ಅದನ್ನು ಅಡಚನೆಗಾಗಿ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಅಡಚನೆಗಾಗಿ ಮಾರಾಟ ಮಾಡಿರುವುದರಿಂದ ನಿಮಗೆ ಹೊಲ ತೆಗೆದುಕೊಳ್ಳುವ ಸಾಮರ್ಥ ಇರಲಿಲ್ಲ ಎಂದರೆ ಸಾಕ್ಷಿ ಇದೆ ನನಗೆ ರಾಜಾಪೂರದಲ್ಲಿ ಹೊಲ ಇದೆ ಎನ್ನುತ್ತಾರೆ. ನೀವು ಬರೆಸಿಕೊಂಡಿದ್ದೀರಿ ಎಂದು ಹೇಳುವ ಖರೀದಿ ಕರಾರುಪತ್ರದ ಬಗ್ಗೆ 2 ನೇ ಪ್ರತಿವಾದಿಗೆ ಗೊತ್ತಿರಲಿಲ್ಲ ಎಂದರೆ ಸಾಕ್ಷಿ ಅವರಿಗೆ

ಗೊತ್ತಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. 2 ನೇ ಪ್ರತಿವಾದಿ ಖರೀದಿ ಕರಾರು ಮಾಡಿರುವ ಆಸ್ತಿಯಲ್ಲಿ ಅವರೇ ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯ ಸಲ್ಲಿಸಿದ ನಂತರ ಸರ್ವೇ ನಂ.118/1-ಬಿ ನಲ್ಲಿ 2 ಗುಂಟೆ ಜಮೀನಿಗೆ ನಾನು ಖರೀದಿ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿ. ದಾವೆ ದಾಖಲಿಸಿದ್ದರೂ ಸಹ ನೀವು ಖರೀದಿ ಪತ್ರ ಯಾವ ಕಾರಣಕ್ಕಾಗಿ ಬರೆಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಹಣ ಇತ್ತು ಬರೆಸಿಕೊಂಡಿದ್ದೇನೆ ಎನ್ನುತ್ತಾರೆ. ಆ ರೀತಿ ಖರೀದಿ ಪತ್ರ ಬರೆಸಿಕೊಳ್ಳಲು ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿಲ್ಲ. ಖರೀದಿ ಪತ್ರ ಬರೆಸಿಕೊಂಡ ಬಗ್ಗೆ ಹೊಸಮನಿರವರ ಗಮನಕ್ಕೆ ತಂದಿಲ್ಲ. ನಾನು ಮತ್ತು 1 ನೇ ಪ್ರತಿವಾದಿ ಶಾಮೀಲಾಗಿ ಖರೀದಿ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದ ಪ್ರಕಾರ ಇವತ್ತಿಗೂ ಸಹ ನಾನು ಸದರಿ ಜಮೀನಿನ ಸ್ವಾಧೀನಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ.

3. ನಾನು ಹಾಜರು ಪಡಿಸಿದ ನಿಪಿ1 ಸ್ವಾಧೀನರಹಿತ ಎಂದು ತೋರಿಸುತ್ತದೆ ಎಂದರೆ ಸರಿ. ನಿಪಿ2 ರ ಪ್ರಕಾರ ನಾನು ಸ್ವಾಧೀನ ಪಡೆದುಕೊಂಡಿದ್ದೇನೆ. ಬೇರೆ ದಾಖಲೆಗಳು ಇಲ್ಲ. ಸದರಿ ಜಮೀನಿಗೆ 11-ಇ ನಕ್ಷೆ ಆಗಿಲ್ಲ ಎಂದರೆ ಸರಿಯಲ್ಲ. 11-ಇ ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಖರೀದಿ ಪತ್ರದ ಪ್ರಕಾರ ನನ್ನ ಹೆಸರಿನಲ್ಲಿ ಉತಾರ ದಾಖಲಾಗಿರುವ ಬಗ್ಗೆ ತೋರಿಸಲು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ದಾವೆ ಸಲ್ಲಿಸಿದ ನಂತರ ನಾನು ಮತ್ತು 1 ನೇ ಪ್ರತಿವಾದಿ ಒಂದಾಗಿದ್ದೇವೆ ಎಂದರೆ ಸರಿಯಲ್ಲ. ಉದ್ದೇಪೂರ್ವಕವಾಗಿ ನಾನು 1 ನೇ ಪ್ರತಿವಾದಿಂದ ತಕರಾರು ಹಾಕಿಸಿಲ್ಲ ಎಂದರೆ ಸರಿಯಲ್ಲ. ದಾವೆ ಸಲ್ಲಿದ ನಂತರ ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಸಂಭಂದ ಚೆನ್ನಾಗಿಲ್ಲ. 2019 ರಿಂದ ಇಲ್ಲಿಯವರೆಗೆ ನನ್ನ ಹಾಗೂ ಅವರ ಸಂಭಂದ ಚೆನ್ನಾಗಿಲ್ಲ. ಖರೀದಿ ಪತ್ರ ಬರೆಸಿಕೊಂಡಿದ್ದೇನೆ ಎಂದು ಅದರ ಮೇಲೆ ನನ್ನ ಹಕ್ಕು ಇಲ್ಲ ಎಂದು ನನ್ನ ವಾದಪತ್ರದಲ್ಲಿ ತಿದ್ದುಪಡಿ ಮಾಡಿಕೊಂಡಿಲ್ಲ. 2 ನೇ ಪ್ರತಿವಾದಿಗೆ ಕಾನೂನು ಬದ್ದವಾಗಿ ಕರಾರುಪತ್ರ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನಾನು ಮಾಡಿಕೊಂಡ ನಂತರ ಅವರು ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ನನ್ನ ಸಾಕ್ಷ್ಯ

ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳಾಗಿದ್ದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ